## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 672 (818)
ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ.
ಉತ್ತರಿಸಬೇಕಾದ ದಿನಾಂಕ : 10.03.2026
ಉತ್ತರಿಸಬೇಕಾದ ಸಚಿವರು : ಪೌರಾಡಳಿತ ಮತ್ತುಹಜ್ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಇ-ತಂತ್ರಾಂಶದ ಮೂಲಕ ನಮೂನೆ-3 (ಆಸ್ತಿ) ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆಯೇ; ಇದಕ್ಕಿರುವ ನಿಯಮ ಮತ್ತು ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು) | ಹೌದು.<br>ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇ-ಆಸ್ತಿ ತಂತ್ರಾಂಶ ಬಳಕೆ ಮಾಡಿ ನೀಡಲಾಗುವ ಇ-ಖಾತಾದಲ್ಲಿ (ನಮೂನೆ-3 / 3ಎ) ತಿದ್ದುಪಡಿ ಮಾಡಲು ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಾಗೂ ತಾಂತ್ರಿಕ ಹಿತದೃಷ್ಟಿಯಿಂದ ಸದರಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀಡಲಾದ ಒಟ್ಟು ಇ-ಖಾತಾಗಳಲ್ಲಿನ (ನಮೂನೆ-3 / 3ಎ) ಶೇಕಡಾ 10ರಷ್ಟನ್ನು ತಿದ್ದುಪಡಿ ಮಾಡಲು ಆಯಾ ನಗರ ಸ್ಥಳೀಯ ಸಂಸ್ಥೆಗಳ ಹಂತದಲ್ಲಿಯೇ ಕ್ರಮ ಕೈಗೊಳ್ಳಲು ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ: 29771 DMA 130 KMDS 2019-20 ರಂತೆ ಇ-ಆಸ್ತಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. |
| ಆ) | ನಮೂನೆ-3 ತಿದ್ದುಪಡಿಗೆ ಶೇ.10 ರಷ್ಟು ಮಿತಿ ನಿಗದಿಪಡಿಸಿರುವುದರಿಂದ ಅನೇಕ ಅರ್ಹ ಪ್ರಕರಣಗಳಲ್ಲಿ ತಿದ್ದುಪಡಿಗೆ ಅವಕಾಶವಿಲ್ಲದೇ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಆಸ್ತಿ ತಂತ್ರಾಂಶದ ಮೂಲಕ ಇ-ಖಾತಾ (ನಮೂನೆ-3 / 3ಎ) ನೀಡುವ ಸಂದರ್ಭದಲ್ಲಿ ಮೊದಲಿಗೆ ಕರಡು ಪ್ರತಿಯನ್ನು ಸೃಜಿಸಿ, ಸಂಬಂಧಪಟ್ಟ ನಾಗರೀಕರಿಗೆ ನೀಡಿ, ಒಂದು ವೇಳೆ ತಿದ್ದುಪಡಿಗಳಿದ್ದಲ್ಲಿ ಅದನ್ನು ಪರಿಶೀಲಿಸಿ, ನೀಡಲು ಕೋರಲಾಗುತ್ತದೆ. ನಾಗರೀಕರು ಕರಡು ಪ್ರತಿಯನ್ನು ಪರಿಶೀಲಿಸಿ ನೀಡಿದ ನಂತರದಲ್ಲಿ ಅಂತಿಮ ಇ-ಖಾತಾ (ನಮೂನೆ-3 / 3ಎ) ಸೃಜಿಸಿ, ನೀಡಲಾಗುತ್ತಿದೆ.<br>ಅಂತಿಮ ಇ-ಖಾತಾ (ನಮೂನೆ-3 / 3ಎ) ಸೃಜಿಸಿ, ನೀಡಲಾದ ನಂತರದಲ್ಲಿಯೂ ಸಹ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿದ ಸಂದರ್ಭಗಳಲ್ಲಿ, ಸದರಿ ನಗರ ಸ್ಥಳೀಯ ಸಂಸ್ಥೆಗಳಿಂದ ನೀಡಲಾದ ಒಟ್ಟು ಇ-ಖಾತಾಗಳಲ್ಲಿನ (ನಮೂನೆ-3 / 3ಎ) ಶೇಕಡಾ 10ರಷ್ಟನ್ನು ತಿದ್ದುಪಡಿ ಮಾಡಲು ಆಯಾ ನಗರ ಸ್ಥಳೀಯ ಸಂಸ್ಥೆಗಳ ಹಂತದಲ್ಲಿಯೇ ಕ್ರಮ ಕೈಗೊಳ್ಳಲಾಗುತ್ತಿದೆ.<br>ಆದರೆ, ಶೇಕಡಾ 10ರ ಮಿತಿಯನ್ನು ಮೀರಿ ತಿದ್ದುಪಡಿ ಮಾಡಲು ಹಲವಾರು ಪ್ರಸ್ತಾವನೆಗಳು ಸ್ವೀಕೃತವಾಗುತ್ತಿರುವುದರಿಂದ ತಿದ್ದುಪಡಿ ಮಿತಿಯನ್ನು ಶೇಕಡಾ 10 ರಿಂದ ಶೇಕಡಾ 30ರಷ್ಟು ಹೆಚ್ಚಿಸುವ ಬಗ್ಗೆ ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ. |
| ಇ) | ಅರ್ಹ ಪ್ರಕರಣಗಳಲ್ಲಿ ಸಾರ್ವಜನಿಕರಿಗೆ ನೆರವಾಗುವಂತೆ ತಿದ್ದುಪಡಿ ಮಿತಿಯನ್ನು 10 ರಿಂದ ಶೇಕಡ 30ರಷ್ಟು ಹೆಚ್ಚಿಸುವಲ್ಲಿ ಸರ್ಕಾರದ ನಿಲುವೇನು? | |

**ಸಂಖ್ಯೆ: ನಅಇ 63 ಜಿಇಎಲ್ 2026 (ಇ)**

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು